| | |
|---|---|
| ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ. | |
| ಸಿ.ಸಿ. ನಂ.**30/2022** | |
| ಚಾಸಾ - **2** | |
| ಪ್ರಾಸಾ - **2** | |
| ಸಾಕ್ಷಿದಾರರ ಹೆಸರು | ಶ್ರೀಶೈಲ ಬಾಬಕರ |
| ತಂದೆ/ಗಂಡ/ತಾಯಿ ಹೆಸರು | ಅರ್ಜುನ |
| ವಯಸ್ಸು | **33** ವರ್ಷ |
| ಉದ್ಯೋಗ | ವ್ಯಾಪಾರ |
| ವಾಸಸ್ಥಳ | ಸಾವಳಗಿ. |

ಸಾಕ್ಷಿಯನ್ನು ದಿನಾಂಕಃ-**17.01.2024** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ-ಸ.ಸ.ಅ ರವರಿಂದಃ-

ನಮ್ಮ ಅಂಗಡಿಯ ಎದುರಿನ ಅಂಗಡಿಯಲ್ಲಿ ಕಳ್ಳತನವಾಗಿತ್ತು. ಆ ವಿಚಾರವಾಗಿ ಪೋಲೀಸರು ನನ್ನನ್ನು ಕರೆದಿದ್ದರು. ಅಲ್ಲಿ ಭಾವಚಿತ್ರ ತೆಗೆದುಕೊಂಡಿದ್ದಾರೆ. ಆಗ ಸಮಯ 12ಃ50 ಗಂಟೆಯಿಂದ 01ಃ50 ಗಂಟೆ ಆಗಿತ್ತು. ನಂತರ ಪೋಲೀಸ ಠಾಣೆಗೆ ಕರೆದುಕೊಂಡು ಹೋಗಿ ಸಹಿ ತೆಗೆದುಕೊಂಡಿದ್ದಾರೆ. ಸ್ಥಳ ಮಹಜರನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

ನಂತರ ಪೋಲೀಸ ಠಾಣೆ ಹತ್ತಿರ ಭಾವಚಿತ್ರಗಳನ್ನು ಪೋಲೀಸರು ತೆಗೆದುಕೊಂಡಿದ್ದಾರೆ. ಸದರಿ ಭಾವಚಿತ್ರಗಳನ್ನು ನಿಪಿ-7 ಮತ್ತು ನಿಪಿ-8 ಎಂದು ಗುರುತಿಸಲಾಯಿತು. ನಂತರ ಪೋಲೀಸ ಠಾಣೆಯ ಒಳಗಡೆ ಕರೆದುಕೊಂಡು ಹೋಗಿ ನನ್ನ ಸಹಿಯನ್ನು ತೆಗೆದುಕೊಂಡಿದ್ದಾರೆ. ಅಮಾನತ್ತು ಮಹಜರ ಮೇಲಿನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅಮಾನತ್ತು ಮಹಜರನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

ಇನ್ನೊಂದು ಸಹಿಯನ್ನು ಪೋಲೀಸರು ದಿನಾಂಕ 13.04.2022 ರಂದು ಠಾಣೆಯಲ್ಲಿ ತೆಗೆದುಕೊಂಡಿದ್ದಾರೆ. ಯಾರದ್ದೊ ತೋಟಕ್ಕೆ ಪೋಲೀಸರು ನನ್ನನ್ನು ಕರೆದುಕೊಂಡು ಹೋಗಿ ಅಲ್ಲಿ ಭಾವಚಿತ್ರಗಳನ್ನು ತೆಗೆದುಕೊಂಡಿದ್ದಾರೆ. ಸದರಿ ಭಾವಚಿತ್ರಗಳನ್ನು ನಿಪಿ-10 ಮತ್ತು ನಿಪಿ-11 ಎಂದು ಗುರುತಿಸಲಾಯಿತು. ಹೆಚ್.ಪಿ ಮೋಟಾರ ಅಮಾನತ್ತು ಮಹಜರ ಮೇಲಿನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಹೆಚ್.ಪಿ. ಮೋಟಾರು ಅಮಾನತ್ತು ಮಹಜರನ್ನು ನಿಪಿ-12 ಎಂದು, ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ಇನ್ನೊಂದು ಮಹಜರ ಮೇಲೆ ಪೋಲೀಸರು ಅದೇ ದಿನ ನನ್ನ ಸಹಿಯನ್ನು ತೆಗೆದುಕೊಂಡಿದ್ದಾರೆ. ಆರೋಪಿತರು ತೋರಿಸಿದಂತಹ ಸ್ಥಳದ ಮಹಜರ ಮೇಲಿರುವ ಸಾಕ್ಷಿ ಒಪ್ಪಿಕೊಂಡಿದ್ದರಿಂದ, ಸ್ಥಳ ಮಹಜರನ್ನು

ನಿಪಿ-13 ಎಂದು ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ಪೋಲೀಸರು ನನ್ನ ಭಾವಚಿತ್ರಗಳನ್ನು ಅಂಗಡಿಯ ಹಿಂದೆ ತೆಗೆದುಕೊಂಡಿದ್ದಾರೆ. ಸದರಿ ಭಾವಚಚಿತ್ರಗಳನ್ನು ಸಾಕ್ಷಿ ಗುರುತಿಸಿದ್ದರಿಂದ, ಭಾವಚಿತ್ರಗಳನ್ನು ನಿಪಿ-14 ಮತ್ತು ನಿಪಿ-15 ಎಂದು ಗುರುತಿಸಲಾಯಿತು. ಮಹಜರಗಳಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ.

**(ಈ ವೇಳೆಗೆ ಸ.ಸ.ಅ ರವರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ಕೋರಿದ್ದು, ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)**

**<u>ಪಾಟೀ ಸವಾಲುಃ- ಸ.ಸ.ಅ. ರವರಿಂದಃ-</u>**

ದಿನಾಂಕ 02.03.2022 ರಂದು ಚಾಸಾ-1 ರವರ ಅಂಗಡಿಯಲ್ಲಿ ಕಳ್ಳತನ ಆಗಿದ್ದರ ಹಿನ್ನಲೆಯಲ್ಲಿ ಪೋಲೀಸರು ಸ್ಥಳಕ್ಕೆ ಬಂದಾಗ ನನ್ನನ್ನು ಪಂಚರನ್ನಾಗಿ ಸಹಿ ಮಾಡಲು ಕರೆದಿದ್ದರು ಎಂದರೆ ಸರಿಯಲ್ಲ. ನನ್ನ ಸಮಕ್ಷಮದಲ್ಲಿ ಮಹಜರ ಮಾಡಿದ್ದಾರೆ ಎಂದರೆ ಸರಿಯಲ್ಲ. ಪೋಲೀಸ ಠಾಣೆಯಲ್ಲಿ ನನ್ನ ಸಮಕ್ಷಮದಲ್ಲಿ ಕಳ್ಳತನಕ್ಕೆ ಉಪಯೋಗಿಸಿದಂತಹ ದ್ವಿಚಕ್ರ ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಪಂಪ್ ಸೆಟ್‌ಗಳನ್ನು 1ನೇ ಆರೋಪಿ ತನ್ನ ಮನೆಯಲ್ಲಿ ಇಟ್ಟುಕೊಂಡಿದ್ದು, ಅವುಗಳನ್ನು ಅಮಾನತ್ತು ಮಾಡುವ ಸಮಯದಲ್ಲಿ ನಾನು ಪಂಚನಾಗಿ ಇದ್ದು, ಮಹಜರನಲ್ಲಿ ಬರೆದ ವಿಷಯಗಳನ್ನು ತಿಳಿದುಕೊಂಡು ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನಂತರ ಆರೋಪಿತರು ಯಾವ ರೀತಿಯಾಗಿ ಕಳ್ಳತನ ಮಾಡಿದ್ದಾರೆಂದು, ಸ್ಥಳವನ್ನು ತೋರಿಸಿದಾಗ ನಾನು ಸ್ಥಳದಲ್ಲಿ ಹಾಜರಿದ್ದು ಮಹಜರನಲ್ಲಿ ಬರೆದ ವಿಷಯಗಳನ್ನು ತಿಳಿದುಕೊಂಡು ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ವಿಷಯಗಳು ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ-</u>**

ಏನೂ ಇಲ್ಲ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

ಸಹಿ/-
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.

ಸಾಕ್ಷಿಯ ಸಹಿ